**ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ ನ್ಯಾಯಾಲಯ, ಹೊಸಕೋಟೆ**

**ಸಿ.ಸಿ. 362/2010**

| | | |
|---|---|---|
| ಹೆಸರು | ಉಮೇಶ | ಪ್ರಾ.ಸಾ.1 |
| ತಂದೆ ಹೆಸರು | ಮಂಜು ಶೆಟ್ಟಿ | ಚಾ.ಸಾ.1 |
| ವಯಸ್ಸು | 41 ವರ್ಷ | |
| ಕೆಲಸ | ಚಾಲಕ | ಸಾ.ಪ್ರ.ವ.ಬೋ |
| ಹಾಲಿ ವಾಸ | ಶೆಟ್ಟಿಹಳ್ಳಿ, ಹಾಸನ | ದಿ: 17.09.2019 |

**ಮುಖ್ಯ ವಿಚಾರಣೆ: ಮಾನ್ಯ ಎಪಿಪಿ ರವರಿಂದ: –**

ಚಾ.ಸಾ.4ರವರ ಬಳಿ ಚಾಲಕನಾಗಿ ಕೆಲಸ ಮಾಡುತ್ತೇನೆ. ಸುಮಾರು 9 ವರ್ಷಗಳ ಹಿಂದೆ ಚಾ.ಸಾ.4ರವರು ನನಗೆ ತಿರುಪತಿಗೆ ಹೋಗಲು ವಾಹನ ಬುಕ್ ಆಗಿದೆ, ಅದರಂತೆ ನನಗೆ ಮಾಹಿತಿ ನೀಡಿರುತ್ತಾರೆ. ಸದರಿ ಮಾಹಿತಿಯಂತೆ ಮಾರುತಿನಗರ, ಬೆಂಗಳೂರಿಗೆ ಇನ್ನೋವಾ ನೋಂದಣಿ ಸಂ.ಕೆಎ–05–ಇಡಿ–5446 ವಾಹನವನ್ನು ತೆಗೆದುಕೊಂಡು ಹೋಗಿರುತ್ತೇನೆ. ಅಲ್ಲಿ ಬುಕ್ ಮಾಡಿದವರನ್ನು ವಾಹನದಲ್ಲಿ ಕೂರಿಸಿಕೊಂಡು ಹೊರಟಿರುತ್ತೇನೆ. ಆಗ ಅವರು ಇನ್ನೂ 3 ಜನ ಬರುತ್ತಾರೆ. ಅವರನ್ನು ಕೋಲಾರದ ಬಳಿ ಹತ್ತಿಸಿಕೊಳ್ಳಬೇಕು ಎಂದು ಹೇಳಿರುತ್ತಾರೆ. ನಂತರ ನಾನು ಹೊಸಕೋಟೆ ಮಾರ್ಗವಾಗಿ ವಾಹನ ಚಲಾಯಿಸಿರುತ್ತೇನೆ. ಸುಮಾರು ರಾತ್ರಿ 11.30ಕ್ಕೆ ಆರೋಪಿಗಳು ಹೊಸಕೋಟೆ ಬಳಿ ಇರುವ ಸರ್ವಿಸ್ ಸ್ಟೇಷನ್ ಬಳಿ ವಾಹನವನ್ನು ನಿಲ್ಲಿಸಲು ತಿಳಿಸಿರುತ್ತಾರೆ. ಕೆಲ ನಿಮಿಷಗಳ ನಂತರ ನಾನು ಅವರನ್ನು ನಿಮ್ಮ ಕಡೆಯವರು ಇನ್ನೂ ಬಂದಿಲ್ಲವಾ? ಎಂದು ಕೇಳಿರುತ್ತೇನೆ. ಆಗ ಅವರು ನನ್ನ ಮೇಲೆ ಹಲ್ಲೆ ಮಾಡಿ, ರೂ.5,000/– ಮತ್ತು 2 ಮೊಬೈಲ್‌ಗಳನ್ನು ತೆಗೆದುಕೊಂಡಿರುತ್ತಾರೆ.

ನಂತರ ಆರೋಪಿಗಳು ನನ್ನನ್ನು ಕೋಲಾರದವರೆಗೂ ಕರೆದುಕೊಂಡು ಹೋಗಿ ಯೂ ಟರ್ನ್ ತೆಗೆದುಕೊಂಡು ಮಾಲೂರು ರಸ್ತೆಗೆ ಹೋಗಿದ್ದು, ಅಲ್ಲಿ ನನ್ನನ್ನು ವಾಹನದಿಂದ ತಳ್ಳಿ ವಾಹನವನ್ನು ತೆಗೆದುಕೊಂಡು ಹೋಗಿರುತ್ತಾರೆ. ನಂತರ ನಾನು ನಡೆದುಕೊಂಡು ಒಂದು ಹಳ್ಳಿಗೆ ಹೋಗಿರುತ್ತೇನೆ. ಅಲ್ಲಿಂದ ಚಾ.ಸಾ.4ರವರಿಗೆ ವಿಚಾರ ತಿಳಿಸಿರುತ್ತೇನೆ. ನಂತರ ಮಾಲೂರು ಠಾಣೆಯಲ್ಲಿ ದೂರು ದಾಖಲಿಸಿರುತ್ತೇನೆ. ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿರುತ್ತೇನೆ. ನಂತರ ಪೊಲೀಸರು ಹೊಸಕೋಟೆ ಸರ್ವಿಸ್ ಸ್ಟೇಷನ್ ಬಳಿ ಮಹಜರ್ ಕ್ರಮ ಜರುಗಿಸಿರುತ್ತಾರೆ. ನಂತರ ನನ್ನನ್ನು ವಾಹನದಿಂದ ಹೊರದಬ್ಬಿದ ಸ್ಥಳದಲ್ಲೂ ಮಹಜರ್ ಕ್ರಮ ಜರುಗಿಸಿರುತ್ತಾರೆ.

**ಮುಂದುವರೆದ ಮುಖ್ಯ ವಿಚಾರಣೆಗೆ ಸಮಯ ಕೋರಿದ್ದು, ನೀಡಲಾಯಿತು.**

**(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಗಣಕೀಕರಿಸಲಾಯಿತು)**

**ಓ.ಹೇ.ಕೇ.ಸ.ಇದೆ**

**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು, ಹೊಸಕೋಟೆ.**